ಬಾಲವನ್ನು ಅತ್ತಿತ್ತ ಆಡಿಸುತ್ತಾ ಯುದ್ಧಕ್ಕೆ ಸಿದ್ಧವಾದಂತೆ ನಿಂತಿತ್ತು. ಒಮ್ಮೆಗೇ ಭಯವಾಗಿ ಅಲ್ಲಿಂದ ಓಡಿದ ಸಂದೀಪ ಮೆಟ್ಟಿಲು ಹತ್ತಿ ನಟೇಶನ ಕೋಣೆಗೆ ಬಂದು ಏದುಸಿರು ಬಿಡುತ್ತಾ ನಿಂತ. ಅವನನ್ನು ನೋಡಿದ ವಿನಯ ನಿರ್ಲಕ್ಷ್ಯದಿಂದ 'ಏನಾಯ್ತೋ? ಮತ್ತೆ ಬೆಕ್ಕು ಕಾಣಿಸ್ತೇನೋ?' ಎಂದು ಕೇಳಿದ. ಸಂದೀಪ ಏನೂ ಉತ್ತರಿಸದೇ ಅವನತ್ತ ನೋಡಿದ. ಅವನ ಪಕ್ಕದಲ್ಲಿ ಫೇರ್‌ವೆಲ್ ಬೋರ್ಡು ತಯಾರಾಗಿತ್ತು. 'ನೀವು ಕೊಟ್ಟ ನೆನಪುಗಳಿಗೆ ನಮ್ಮ ನೆನಪಿನ ಕಾಣಿಕೆ. ಬ್ಯಾಚ್ 2010-14' ಎಂಬ ಸಾಲುಗಳು ಇದ್ದವು. ನೀವು ಕೊಟ್ಟ ನೆನಪುಗಳು!? ಸಂದೀಪ ಒಮ್ಮೆ ಮುಖದಲ್ಲಿ ಆವರಿಸಿದ್ದ ಬೆವರನ್ನು ಒರೆಸಿಕೊಂಡ.

ಕೆಲವರು ಯಾಕೆ ಮಕ್ಕಳಿಗೆ ಆಕರ್ಷಕವಾದ, ಪ್ರಬಲ ಎಂದೆನಿಸುವ ಹೆಸರುಗಳನ್ನು ಇಡುತ್ತಾರೆ? ಆ ಹೆಸರಿನ ಘನತೆಯನ್ನು ಉಳಿಸಬೇಕೆಂದೇ ಅಲ್ಲವೇ ಅವರುಗಳು ಅವರಲ್ಲಿಲ್ಲದ ಕಾಠಿಣ್ಯತೆಯನ್ನು ರೂಢಿಸಿಕೊಳ್ಳುವುದು? ಆ ಹೆಸರಿಗೆ ನ್ಯಾಯ ಸಲ್ಲಿಸಬೇಕೆಂದೇ ಅಲ್ಲವೇ ಈ ಅರಿಹಂತನ ಹಾಗೆ ಪಾಪದವರನ್ನು ವೈರಿಗಳನ್ನಾಗಿ ಮಾಡಿಕೊಂಡು ಅವರನ್ನು ಬಗ್ಗುಬಡಿಯುವುದು? ನನ್ನ ತರಹ ಮಾಮೂಲಿ ಹೆಸರಿಟ್ಟುಕೊಂಡು ಯಾರಿಗೂ ತೊಂದರೆ ಕೊಡದೇ, ಯಾರಲ್ಲೂ ಭಯ ಹುಟ್ಟಿಸದೇ ಬದುಕಿದರೆ ಇವರ ಗಂಟೇನು ಹೋಗುತ್ತದೆ? ಅರಿಹಂತನ ಜೊತೆ ಇನ್ನೂ ಸೂರ್ಯ ಮೂಡಿರದ ಹಾದಿಯಲ್ಲಿ ನಡೆಯುತ್ತಾ ಸಂದೀಪ ಯೋಚಿಸುತ್ತಿದ್ದ. ಅವರಿಬ್ಬರೂ ಹಾಸ್ಟೆಲ್ಲಿನ ಎದುರಿರುವ ರಸ್ತೆಯನ್ನು ದಾಟಿ ತಂತಿಬೇಲಿಯನ್ನು ಹಾರಿ ಸರ್ಕಾರಿ ಕಲಾ ಕಾಲೇಜಿನ ಪಕ್ಕದ ಮೈದಾನದಲ್ಲಿ ಹೆಜ್ಜೆ ಹಾಕುತ್ತಿದ್ದರು. ಹೆಚ್ಚಾಗಿ ಬಳಸದೇ ಎದೆಮಟ್ಟಕ್ಕೆ ಕಳೆ ಬೆಳೆದಿದ್ದ ಆ ಜಾಗದಲ್ಲಿ ನಡೆಯುವಾಗ ಎಲ್ಲಿ ಕಾಲಿಗೆ ಒಡೆದ ಬಾಟಲಿ ತಗುಲುತ್ತದೋ, ಎಲ್ಲಿ ಕಾಲಿನಡಿ ಬುಸ್ಸೆಂದು ಹಾವು ಪ್ರತ್ಯಕ್ಷವಾಗುತ್ತದೋ ಎಂಬ ಭಯದಲ್ಲಿ ಸಂದೀಪ ನಿಧಾನಕ್ಕೆ ನಡೆಯುತ್ತಿದ್ದ. ಇವನ ಭಯ, ಅಸಹಾಯಕತೆಗೆ ಯಾವ ಬೆಲೆಯನ್ನೂ ಕೊಡದ ಅರಿಹಂತ ತಾನು ಪ್ರತೀ ವಾರ ನಡೆಯುವ ಅದೇ ದಾರಿಯಲ್ಲಿ ಆನೆಯಂತೆ ಮುನ್ನುಗ್ಗುತ್ತಿದ್ದ. ಒಂದು ಕಿಲೋಮೀಟರ್ ಉಳಿಸುವುದಕ್ಕೆ ಈ ಅಪಾಯಕಾರಿ ಜಾಗದಲ್ಲಿ ತನ್ನನ್ನು ಕರೆತಂದಿರುವ ಆತನ ನಿರ್ದಾಕ್ಷಿಣ್ಯ ವರ್ತನೆ ಸಂದೀಪನಿಗೆ ದೌರ್ಜನ್ಯದ ತರಹ ಗೋಚರಿಸುತ್ತಿತ್ತು. ಆ ಅಸಹನೆಯಲ್ಲಿಯೇ ಒಂದು ಸೆಮಿಸ್ಟರ್ ಮುಗಿಸಿದ್ದ ಸಂದೀಪ ಈಗೀಗ ಸಂತ್ರಸ್ತನಾಗಿರುವುದನ್ನೂ ಅಭ್ಯಾಸ ಮಾಡಿಕೊಂಡಿದ್ದ ಎನ್ನಬಹುದು. ಪ್ರತಿದಿನ ಒಲೆ ಉರಿ ಹಾಕುವುದು, ಕ್ರಿಕೆಟ್ ಆಡುವಾಗ ಬಾಲ್ ಒಡೆದು ಹೋದರೆ ಅಂಗಡಿಯಿಂದ ತರುವುದು, ಗ್ಯಾಸ್ ಬುಕ್ ಮಾಡುವುದು, ಪೇಟೆಗೆ ಹೋಗಿ ಕರೆಂಟ್ ಬಿಲ್ ಕಟ್ಟಿ ಬರುವುದು, ಸೀನಿಯರುಗಳಿಗೆ ಬೇಸರವಾದಾಗ ಡ್ಯಾನ್ಸ್ ಮಾಡುವುದು, ಈ ಎಲ್ಲಾ ಜವಾಬ್ದಾರಿಗಳ ಜೊತೆಗೆ ಜ್ಯೂನಿಯರುಗಳಿಗೆ ಮತ್ತೊಂದು ಜವಾಬ್ದಾರಿ ಇತ್ತು, ಅದೇ ಪ್ರತೀ ಮಂಗಳವಾರ ಅರಿಹಂತನ ಜೊತೆಗೆ ಎಪಿಎಂಸಿ ಯಾರ್ಡಿಗೆ ಹೋಗಿ ತರಕಾರಿ ತರುವುದು. ಕೇವಲ ಹಾಸ್ಟೆಲ್ಲಿನ ಸ್ವಚ್ಛತೆ ಮತ್ತು ನಿರ್ವಹಣೆಯನ್ನು ಮಾತ್ರ ಕಮಿಟಿಯವರು ನೋಡಿಕೊಳ್ಳುತ್ತಿದ್ದುದು. ಊಟದ ವ್ಯವಸ್ಥೆಯನ್ನು ಅವರು ಕೊಟ್ಟಿರಲಿಲ್ಲ. ಹುಡುಗರೇ ಸೇರಿ ಉಂಬ್ಳೆಬೈಲಿನ ಕಡೆಯಿಂದ ಒಬ್ಬರು ಒಳ್ಳೇ ಅಡುಗೆಭಟ್ಟರನ್ನು ಕರೆದುಕೊಂಡು ಬಂದು ಹಾಸ್ಟೆಲ್ಲಿನಲ್ಲಿಯೇ ಕಮಿಟಿಯ ಅನುಮತಿಯೊಂದಿಗೆ ಉಳಿದುಕೊಳ್ಳಲು ವ್ಯವಸ್ಥೆ ಮಾಡಿಕೊಟ್ಟಿದ್ದರು. ಹಾಗಾಗಿ ಭಟ್ಟರ ಸಂಬಳ, ತರಕಾರಿ, ದಿನಸಿ, ಸಿಲಿಂಡರು ಇವೆಲ್ಲಾ ಹುಡುಗರ ತಲೆಗೇ ಬೀಳುತ್ತಿದ್ದುದು. ದಿನಸಿಯಾದರೆ ಕರೆಂಟ್ ಬಿಲ್ಲು ಕಟ್ಟಲು ಹೋದಾಗ ಶೆಟ್ಟಿ ಎಂಟರ್‌ಪ್ರೈಸಸ್ ಅವರಿಗೆ ಚೀಟಿ ಕೊಟ್ಟು ಬಂದರೆ ಎರಡು ದಿನಗಳಲ್ಲಿ ಹಾಸ್ಟೆಲ್ ಎದುರಿಗೇ ಪಿಕಪ್ ವಾಹನದಲ್ಲಿ ತಂದು ಕೊಡುತ್ತಿದ್ದರು. ಆದರೆ ತರಕಾರಿ ಮಾತ್ರ ಪ್ರತೀ ವಾರ ಖರೀದಿಸಲೇಬೇಕಾಗುತ್ತಿತ್ತು. ಎಪಿಎಂಸಿ ಯಾರ್ಡಿನಲ್ಲಿ ಕಿರೇಮಗಳೂರಿನ ಸುತ್ತಮುತ್ತದ ತರಕಾರಿ ಬೆಳೆಗಾರರು ಬೆಳಗ್ಗೆ ಮುಂಚೆಯೇ ಲಾರಿಗಳಲ್ಲಿ ಲೋಡುಗಟ್ಟಲೆ ತರಕಾರಿ ತಂದು ಹಾಕಿರುತ್ತಾರೆ. ಎಲ್ಲಾ ಅಂಗಡಿಯವರು, ಮಾರ್ಟಿನವರು, ತಳ್ಳುಗಾಡಿಯವರೂ ಅಲ್ಲಿಂದಲೇ ತರಕಾರಿಯನ್ನು ಒಯ್ಯುತ್ತಾರೆ. ಅದಕ್ಕೆ ಎರಡೇ ಕಾರಣ, ಒಂದು ತಾಜಾತನ ಮತ್ತೊಂದು ಕಡಿಮೆ ಬೆಲೆ. ಹಾಗಾಗಿಯೇ ನಾಲ್ಕು ಗಂಟೆಗೇ ಅಲ್ಲಿ ಜನಜಂಗುಳಿಯಾಗಿರುತ್ತದೆ. ಅಲ್ಲಿಗೆ ಹೋಗಿ ಎರಡು ಮೂಟೆ ತರಕಾರಿಗಳನ್ನು ತಂದರೆ ಒಂದು ವಾರದ